ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆ

75 (1513); ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ)

ಅ) ಕಸಬಾ ಹೋಬಳಿ ಏತ ನೀರಾವರಿ ಯೋಜನೆಯು ಯಾವ ಹಂತದಲ್ಲಿದೆ;

ಆ) ಕಸಬಾ ಮತ್ತು ಸಂತೆಬೆನ್ನೂರು ಹೋಬಳಿಗಳ ಏತ ನೀರಾವರಿ ಯೋಜನೆಯ ಸರ್ವೇ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಈ ಹೋಬಳಿ ಕೆರೆಗಳಿಗೆ ನೀವು ತುಂಬಿಸುವ ಏತ ನೀರಾವರಿ ಯೋಜನೆಗೆ ನೀರಿನ ಹಂಚಿಕೆ ಆಗಿದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಯಾವಾಗ ಹಂಚಿಕೆ ಮಾಡಲಾಗುವುದು?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಸಂತೆಬೆನ್ನೂರು ಮತ್ತು ಕಸಬಾ ಹೋಬಳಿಗಳ ಕೆರೆಗಳಿಗೆ ನೀರು ತುಂಬಿಸುವ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖಾ ವರದಿಯನ್ನು ಹಾಗೂ ನೀರಿನ ಬೇಡಿಕೆಯ ಬಗ್ಗೆ ಪ್ರಸ್ತಾವನೆ ತಯಾರಿಸಲಾಗುತ್ತಿದೆ.

ಆ) ಸದರಿ ಯೋಜನೆಗೆ ಈಗಾಗಲೇ ಪ್ರಾಥಮಿಕ ಸರ್ವೆ ಕಾರ್ಯ ಕೈಗೊಂಡಿದ್ದು, ಈ ಪ್ರಸ್ತಾವನೆಯ ಸಾಧ್ಯಸಾಧ್ಯತೆ ಪರಿಶೀಲಿಸಿದ ನಂತರ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಇ) ಮತ್ತು ಈ) ಯೋಜನೆಗೆ ನಿಖರವಾದ ನೀರಿನ ಬೇಡಿಕೆಯ ಲೆಕ್ಕಾಚಾರ ಮಾಡಿ ಹಾಗೂ ಲಭ್ಯತೆಯನುಸಾರ ಪ್ರಸ್ತಾವನೆಯನ್ನು ತಯಾರಿಸಿ ಕ್ರಮಕೈಗೊಳ್ಳಲಾಗುವುದು.

ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ):– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನಾನು ಒಂದು ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ. ಚನ್ನಗಿರಿ ತಾಲ್ಲೂಕು ಮಳೆ ಆಶ್ರಿತವಾದ ತಾಲ್ಲೂಕು ಹಾಗೂ ಡಾ॥ ಡಿ.ಎಂ. ನಂಜುಂಡಪ್ಪ ವರದಿಯ ಪ್ರಕಾರ ಅತಿ ಹಿಂದುಳಿದಂತಹ ತಾಲ್ಲೂಕು, ಕುಡಿಯಲು ನೀರು ಇಲ್ಲದೇ ಇರುವಂತಹ ಪರಿಸ್ಥಿತಿಯಲ್ಲಿ ಈಗಾಗಲೇ ಉಗ್ರಾಣಿ ಹೋಬಳಿ ಏತ ನೀರಾವರಿ ಹಾಗೂ ಅಮೃತಪುರ ಏತನೀರಾವರಿ success ಆಗಿದೆ. ಇಡೀ ರಾಜ್ಯದಲ್ಲಿ ಎಲ್ಲೇ success ಆಗಿದ್ದರೂ ಆ ಏತನೀರಾವರಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಮಾನ್ಯ ಹೆಚ್.ಕೆ. ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಮಂಜೂರಾಗಿದ್ದ ಯೋಜನೆ ಇವತ್ತು ನೂರಕ್ಕೆ ನೂರರಷ್ಟು success ಆಗಿರುವಂಥದ್ದು. ಮತ್ತೊಂದು ನೀರಾವರಿ ಯೋಜನೆಯನ್ನು ಮಾಡಿಕೊಟ್ಟರೆ ಚನ್ನಗಿರಿ ತಾಲ್ಲೂಕಿನಲ್ಲಿ ನೀರಿನ ಅಭಾವ ತಪ್ಪುತ್ತದೆ. ಎಲ್ಲಾ ಕೆರೆಗಳನ್ನು ತುಂಬಿಸಲು ಸಾಧ್ಯತೆ ಇದೆ ಎಂದು ಒಂದು ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ಆದರೆ ನಿಖರವಾಗಿ ಒದಗಿಸಿಲ್ಲ. ಸುಮ್ಮನೆ ಮಾಡುತ್ತೇವೆ, ನೋಡುತ್ತೇವೆ, ಕೇಳುತ್ತೇವೆ ಎನ್ನುವ ವರದಿಯನ್ನು ಕೊಟ್ಟಿದ್ದಾರೆ. ನಿಖರವಾಗಿ ನೀವು ನೀರನ್ನು ಹಂಚಿಕೆ ಮಾಡಿದ್ದೀರಾ? ಯಾವಾಗ ಪ್ರಾಥಮಿಕ ವರದಿಯನ್ನು ಮಾಡುತ್ತೀರಿ ಎಂದು ದಯಮಾಡಿ ಮಾನ್ಯ ಸಚಿವರು ನಿಖರವಾಗಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ, ಇದು ನಮಗೆ ಸಣ್ಣ ನೀರಾವರಿಯಿಂದ ಬಂದಿರುವಂಥದ್ದು. 2014 ರ ಬಜೆಟ್‌ನಲ್ಲಿ ಘೋಷಣೆಯಾಗಿದೆ. ಸಾಸ್ವೆಹಳ್ಳಿ ಏತ ನೀರಾವರಿಗೆ ಸಂಬಂಧಿಸಿದಂತೆ ಈಗಾಗಲೇ ಪ್ರಾಥಮಿಕ ತನಿಖಾ ವರದಿಯನ್ನು ಹಾಗೂ ನೀರಿನ ಬೇಡಿಕೆ ಬಗ್ಗೆ ಪ್ರಸ್ತಾವನೆ ತಯಾರಿಸಲಾಗುತ್ತಿದೆ. ಎರಡನ್ನೂ ಗಮನದಲ್ಲಿಟ್ಟುಕೊಂಡು ಮಾರ್ಚ್ ಅಥವಾ ಏಪ್ರಿಲ್ ತಿಂಗಳಿನೊಳಗೆ DPR

ಹಾಗೂ ನೀರಿನ ಲಭ್ಯತೆ ಅನುಸರಿಸಿ ಮುಂದಿನ ಕ್ರಮವನ್ನು ನಿಶ್ಚಿತವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ವಡ್ನಾಳ್ ರಾಜಣ್ಣ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಕ್ಷೇತ್ರಕ್ಕೆ ಇದೇ ತಿಂಗಳು ಎರಡನೇ ತಾರೀಖಿನಂದು ತರಳಬಾಳು ಹುಣ್ಣಿಮೆಗೆ ಬಂದಂತಹ ಸಂಧರ್ಭದಲ್ಲಿ ಇದಕ್ಕೆ ಬೇಕಾದಂತಹ ಅನುದಾನವನ್ನು ನಾವು ಕೊಡುತ್ತೇವೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಈಗ ತಕ್ಷಣ ಸರ್ವೆ ಕಾರ್ಯ ಪ್ರಾರಂಭ ಮಾಡಬೇಕು. ನೀರಿನ ಹಂಚಿಕೆ ಮಾಡಿಕೊಡುವ ಕೆಲಸ ಆಗಬೇಕು ಎನ್ನುವ ವಿನಂತಿಯನ್ನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ದಯಮಾಡಿ ನಿಖರವಾಗಿ ಹೇಳಬೇಕು.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಿಖರವಾಗಿ ಹೇಳುತ್ತಿದ್ದೇನೆ. ಈಗಾಗಲೇ ಪ್ರಾಥಮಿಕ ಸರ್ವೆ ಕಾರ್ಯವನ್ನು ಕೈಗೊಂಡಿದ್ದೇವೆ. ಆ ಕಾರ್ಯ ಮುಗಿದ ಕೂಡಲೇ ನೀರಿನ ಹಂಚಿಕೆ ಬಹಳ ಪ್ರಮುಖವಾದದ್ದು. ಆ ಎರಡನ್ನೂ ಸೇರಿಸಿ ಸಾಧ್ಯವಾದಷ್ಟು ಮಾರ್ಚ್–ಏಪ್ರೀಲ್ ತಿಂಗಳಿನಲ್ಲಿ ನಮಗೆ ಸಂಪೂರ್ಣ ವರದಿ ಬಂದ ಮೇಲೆ ನಾವು ಒಂದು ನಿಖರವಾದಂತಹ ಹೆಜ್ಜೆಯನ್ನು ಇಡಲು ಸಾಧ್ಯವಾಗುತ್ತದೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಸಾಸ್ವೆಹಳ್ಳಿ ಏತನೀರಾವರಿ ಯೋಜನೆ ನನ್ನ ಕ್ಷೇತ್ರಕ್ಕೂ ಬರುತ್ತದೆ.

ಅಧ್ಯಕ್ಷರು:– ಬರುವುದಿಲ್ಲ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಚನ್ನಗಿರಿ ಮತ್ತು ದಾವಣಗೆರೆ ಎರಡೂ ಕ್ಷೇತ್ರಕ್ಕೂ ಸೇರಿಸಿದಂತೆ ಸಾಸ್ವೆಹಳ್ಳಿ ಯೋಜನೆ ನಮಗೆ ಬರುತ್ತದೆ.

(ಗೊಂದಲ)

ಶ್ರೀ ವಡ್ನಾಳ್ ರಾಜಣ್ಣ:– ಮಾನ್ಯ ಅಧ್ಯಕ್ಷರೆ, ಸಾಸ್ವೆಹಳ್ಳಿ ನಮ್ಮ ಕ್ಷೇತ್ರಕ್ಕೆ ಬರುತ್ತದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ನಮ್ಮ ಕ್ಷೇತ್ರಕ್ಕೂ ಬರುತ್ತದೆ.

(ಗೊಂದಲ)

ಶ್ರೀ ವಡ್ನಾಳ್ ರಾಜಣ್ಣ:– ಮಾನ್ಯ ಅಧ್ಯಕ್ಷರೆ, ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸದಸ್ಯರು ಕಸಬಾ ಹೋಬಳಿ ಹಾಗೂ ಸಂತೆಬೆನ್ನೂರು ಏತನೀರಾವರಿಗೆ ಸಂಬಂಧಿಸಿದಂತೆ ಕೇಳಿದ್ದಾರೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಸಾರ್, ಕಸಬಾ ಹೋಬಳಿ ತಾಲ್ಲೂಕಿನ ಭಾಗ ನನ್ನ ಕ್ಷೇತ್ರಕ್ಕೂ ಬರುತ್ತದೆ.

(ಗೊಂದಲ)

ಶ್ರೀ ವಡ್ನಾಳ್ ರಾಜಣ್ಣ:– ಒಂದು ನಿಮಿಷ ಮಾನ್ಯ ಶಿವಮೂರ್ತಿಯವರೆ ನಾನು ಮಾತನಾಡಿದ ನಂತರ ತಾವು ಮಾತನಾಡಿ. ಮಾನ್ಯ ಅಧ್ಯಕ್ಷರೆ, ಇದು ನಾಲ್ಕು ಕ್ಷೇತ್ರಗಳಿಗೆ ಬರುತ್ತದೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಿ ನಂತರ ನನಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಬೇರೆ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಸಂಪೂರ್ಣ ಸರ್ವೆ ಕಾರ್ಯ ಮುಗಿದ ಮೇಲೆ preliminary report ಬಂದು water availability report ಬಂದು ಇವತ್ತಿನ ದಿವಸ ಎಷ್ಟು ಸಾಧ್ಯತೆ ಆಗುತ್ತಿದೆಯೋ ಅಷ್ಟು ಉಳಿಸುವಂತಹ ಕೆಲಸ ಮಾಡುತ್ತೇವೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಮುಖ್ಯಮಂತ್ರಿಯವರು ಚನ್ನಗಿರಿ ಕ್ಷೇತ್ರಕ್ಕೆ ಬಂದಾಗ ವಿಶಾಲವಾಗಿ ಹೇಳಿದ್ದಾರೆ. ತುಂಗಭದ್ರಾ ನದಿಯಿಂದ ಕುಡಿಯುವ ನೀರನ್ನು ಒದಗಿಸಲಾಗುವುದು, ಅದಕ್ಕಾಗಿ ಹಣವನ್ನು ಬಿಡುಗಡೆ ಮಾಡಲಾಗುವುದು ಎನ್ನುವ ವಾಗ್ದಾನ ಮಾಡಿದ್ದಾರೆ. ಬಜೆಟ್‌ನಲ್ಲಿ 525 ಕೋಟಿ ರೂ. ಗಳನ್ನು ಒದಗಿಸಲಾಗುವುದು ಎಂದು ಹೇಳಿದ್ದಾರೆ. ಸರ್ವೆ ಕಾರ್ಯ ಆಗುತ್ತಿದೆ. ದಯವಿಟ್ಟು ನನ್ನ ಪ್ರಾರ್ಥನೆ ಏನೆಂದರೆ, ಇಲ್ಲಿ ನನ್ನ ಮೂರು ತಾಲ್ಲೂಕುಗಳು ಸೇರಿಕೊಳ್ಳುತ್ತವೆ. ಸಾರ್, ಕುಡಿಯುವ ನೀರಿನ ಸಮಸ್ಯೆ, ಕೆರೆ ತುಂಬಿಸುವಂತಹ ಸಮಸ್ಯೆ.

(ಗೊಂದಲ)

ಅಧ್ಯಕ್ಷರು:– ಈ ಪ್ರಶ್ನೆ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯ ವ್ಯಾಪ್ತಿಗೆ ಬರುತ್ತದೆಯೇ?

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ನಮಗೆ ಹೊನ್ನಾಳಿ ಮತ್ತು ನನಗೆ ಮೂರು ಜನರಿಗೂ ಬರುತ್ತದೆ. ದಯವಿಟ್ಟು ಕುಡಿಯುವ ನೀರಿಗೋಸ್ಕರ ಕೆರೆ ತುಂಬಿಸಬೇಕು. ನನ್ನ ಕ್ಷೇತ್ರದಲ್ಲಿ 11 ಕೆರೆಗಳು ಬಿಟ್ಟುಹೋಗುತ್ತಿವೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ರಿಪೋರ್ಟ್‌ನಲ್ಲಿ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಎಷ್ಟು ಸಾಧ್ಯವಾಗುತ್ತದೆ ನೋಡಿ ನೀರಿನ ಲಭ್ಯತೆಯನ್ನು ಆಧರಿಸಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಸಾರ್, ನಮ್ಮದು ಬಯಲು ಪ್ರದೇಶ, 8 ಕಿ.ಮೀ. ಅಂತರದಲ್ಲಿದೆ. ಕುಡಿಯಲು ನೀರೇ ಇಲ್ಲ. ಅದಕ್ಕೋಸ್ಕರ ದಯವಿಟ್ಟು ಸರ್ಕಾರ ಇದನ್ನು ಪರಿಗಣನೆ ಮಾಡಿ ಸರ್ವೆ ಮಾಡಿಸಿ, ಹಣ ತೊಡಗಿಸಿಕೊಡುತ್ತೀರಾ?

(ಗೊಂದಲ)

ಅಧ್ಯಕ್ಷರು:– ಗಾಡಿ ಮೇಲೆ ಹೋಗಿ ಬೇಗ ಕೊಟ್ಟುಬನ್ನಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ನಮಗೆ ಕುಡಿಯುವ ನೀರು ಬೇಕು. ನೀರಿಗೋಸ್ಕರ ಯುದ್ಧ ಆಗಬಹುದು.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಪ್ರಶ್ನೆ ಕೇಳಿ. ಸುಮ್ಮನೆ ಚರ್ಚೆ ಮಾಡಬೇಡಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. ನೀರಿನ ಲಭ್ಯತೆ ಆಧರಿಸಿ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಏರಿಯಾಕ್ಕೆ ನೀರನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಕುಡಿಯುವ ನೀರಿಗೋಸ್ಕರ ನಾವು ಕೇಳುತ್ತಿದ್ದೇವೆ, surface water from Tungabhadra river ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಯಾವುದೇ ಕೆರೆ ತುಂಬುವ ಯೋಜನೆಯಾಗಲಿ ಅದಕ್ಕೆ ನೀರಿನ ಹಂಚಿಕೆ

ಆಗಬೇಕಾಗಿರುತ್ತದೆ. ನಾವು preliminary report ready ಮಾಡುತ್ತಿದ್ದೇವೆ. ಅದರಲ್ಲಿ ನೀರಿನ ಹಂಚಿಕೆಯೂ involve ಆಗಿದೆ. ಅದರಲ್ಲಿ ಎಷ್ಟು ಸಾಧ್ಯತೆಯಾಗುತ್ತದೆಯೋ ಅಷ್ಟನ್ನು cover ಮಾಡುತ್ತೇವೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ನಮ್ಮ ಕ್ಷೇತ್ರ enroute ನಲ್ಲಿದೆ, ಅದನ್ನು ಬಿಟ್ಟು ಮುಂದೆ ನೀರು ಕೊಡುತ್ತಿದ್ದಾರೆ. ಇದು ಯಾವ ನ್ಯಾಯ ಸಾರ್? ಈಗ ಸರ್ವೆ ಕಾರ್ಯದಲ್ಲಿ ...

(ಗೊಂದಲ)

ಅಧ್ಯಕ್ಷರು:– ಮಾನ್ಯ ಶಿವಮೂರ್ತಿಯವರೆ, ನೀವು specific ಆಗಿ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಅದು ನನ್ನ ಕ್ಷೇತ್ರದಲ್ಲಿ ಹಾದುಹೋಗುತ್ತಿದೆ. ನನ್ನ ಕ್ಷೇತ್ರ ಬಿಟ್ಟು.. ಈ ರೀತಿ ಆದರೆ ಹೇಗೆ? ಸಾರ್ ದಯವಿಟ್ಟು ಸರ್ವೆ ಕಾರ್ಯ ಸರಿಮಾಡಿಸಿಕೊಡಿ. ನನ್ನ ಊರು ಬಿಟ್ಟು ಮುಂದಿನ ಊರಿಗೆ ನೀರನ್ನು ಕೊಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಬೇರೆ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಇದು ಆಗುತ್ತಿದೆ. ಪ್ರಾಜೆಕ್ಟ್‌ನಲ್ಲಿ ದುಡ್ಡು ಹಾಕುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನನ್ನ ಊರನ್ನು ಏಕೆ ಬಿಡುತ್ತೀರಿ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಎಲ್ಲವನ್ನು consider ಮಾಡಿಕೊಂಡೆ report ready ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರೆ ಮಾನ್ಯ ಸದಸ್ಯರ ಪ್ರಶ್ನೆ ತಮಗೆ ಅರ್ಥವಾಯಿತೇ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ಅರ್ಥವಾಗಿದೆ.

(ಗೊಂದಲ)

ಅಧ್ಯಕ್ಷರು:– ಅದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವೇ?

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್:– ನಮ್ಮ ಕ್ಷೇತ್ರದ್ದು pass ಆದ ಮೇಲೆ ನಂತರ ಉಳಿದ ಊರುಗಳಿಗೆ ನೀರಾವರಿ ಆಗುತ್ತದೆಂದು ಹೇಳುತ್ತಿದ್ದಾರೆ, ಅದನ್ನೂ ಕೂಡ consider ಮಾಡುತ್ತೇನೆ.

(ಗೊಂದಲ)

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ: 09.02.2015 ರ ಐದನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತಿರಿಸುವ 230 ಪ್ರಶ್ನೆಗಳ ಪೈಕಿ 170 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ. ಈಗ ವಿಧೇಯಕಗಳನ್ನು ಪರ್ಯಾಲೋಚಿಸುವುದು.